

ಕವಿತೆ



ಆರತಿ ಪಟ್ರಮೆ
ಕಲೆ: ದಿನೇಶ್ ಹೊಳ್ಳ





# ಬದುಕ ಪ್ರೀತಿಗೆ...

ಅರ್ಥವಿರದ ಕನಸುಗಳಿಗೆ
ಭಾವದರ್ಥ ಕೊಡುವೆಯಾ?
ಹೇಳು ಗೆಳತಿ ಜೀವತುಂಬಿ
ಬದುಕಿಗರ್ಥ ತರುವೆಯಾ? ।ಪ।

ಉರುಳಿಹೋದ ನಿನ್ನೆಗಳಿಗೆ
ಇರಲಿ ವಿದಾಯದ ನಸುನಗೆ
ಹೊರಳಿಬರುವ ನಾಳೆಗಳಿಗೆ
ಅರಳು ಮೊಗದ ಹೂನಗೆ

ಅರ್ಥವೇಕೆ ಭಾವವೇಕೆ
ಹೇಳು ಗೆಳತಿ ಉಸಿರಿಗೆ?
ನಿನ್ನೊಲವ ನೂರುಬಗೆ
ಜೀವ ಕೊಡಲಿ ಬದುಕಿಗೆ ।ಪ।

ಸುತ್ತಮುತ್ತಲು ಕಪ್ಪು ಕತ್ತಲು
ದಿಕ್ಕು ತೋಚದಂತಿದೆ!
ಅಂದು ಹೊಳೆದ ನಗೆಯ ಮಿಂಚು
ಮುಗಿಲಲಿ ಮರೆಯಾಗಿದೆ!

ದಾರಿತೋರೆ ನಿನ್ನ ಪ್ರೀತಿ
ಹಣತೆಯಾಗಬೇಕಿದೆ
ಕರಿಮುಗಿಲನು ಸೀಳುವಂಥ
ಮಿಂಚು ನೀನೆನಿಸಿಹೆ ।ಪ।

ಲೇಶವಾದರೂ ಕೊರತೆಯಿರದೆ
ನಿನ್ನ ಪ್ರೀತಿ ಕಾಯಲಿ
ಬದುಕಿನೆಡೆಗೆ ದಣಿವರಿಯದೆ
ನಮ್ಮ ಪಯಣ ಸಾಗಲಿ

ಅವರಿವರಿಗೆ ಅರ್ಥವಾಗದ
ನಮ್ಮ ಪ್ರೀತಿಯು ಬಾಳಲಿ
ನೂರು ವರುಷ ಸೋಲಿಲ್ಲದ
ಬದುಕಿನರ್ಥವ ಸಾರಲಿ ।ಪ।

